**<u>ಸಾಕ್ಷಿಯನ್ನು ದಿನಾಂಕಃ 30.11.2024 ರಂದು ಕರೆಸಿ ಪ್ರಮಾಣ ವಚನಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಲ್.ಎಸ್ ವಕೀಲರಿಂದಃ</u>**

ದಾವಾ ಆಸ್ತಿಯನ್ನು ನನ್ನ ಅಜ್ಜಿ ಮರಿತಾಯಮ್ಮ ರವರು ಸಿದ್ದಲಿಂಗರಾಧ್ಯರವರಿಂದ 30.04.1960 ನೇ ಇಸವಿಯಲ್ಲಿ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ತಮ್ಮ ತಂದೆ ಮತ್ತು ದೊಡ್ಡಪ್ಪ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ತಾವು ಹೇಳಿದ್ದು, ವಿಭಾಗ ಪತ್ರ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹಾಜರು ಮಾಡಿಲ್ಲ, ಸದರಿ ವಿಭಾಗ ಪತ್ರ ನನ್ನ ದೊಡ್ಡಪ್ಪನ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ವಿಸ್ತೀರ್ಣ 3 ಎಕರೆ 38 ಗುಂಟೆ. ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ವಿಭಾಗ ಪತ್ರವು ನನ್ನ ದೊಡ್ಡಪ್ಪನ ಹತ್ತಿರ ಇದೆ ಅವರು ಕೊಡುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟನೇ ಇಸವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ದಿಃ17.03.1989 ಎಂದು ನುಡಿಯುತ್ತಾರೆ.

ತಮ್ಮ ತಂದೆಯಿಂದ ತಮಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ಕೇಳಲಾಗಿ ಸಾಕ್ಷಿಯು 31.08.1989 ರಲ್ಲಿ ಮರಣ ಹೊಂದಿದ್ದು, ನನ್ನ ತಂದೆ ಸತ್ತ ನಂತರ ನನ್ನ ತಾಯಿಗೆ , ನನಗೆ ಹಾಗೂ ನನ್ನ ಇಬ್ಬರು ಅಕ್ಕಂದಿರ ಹೆಸರಿಗೆ ಜಂಟಿ ಖಾತೆಯಾಗಿದ್ದು, ದಿಃ 01.06.2020 ರಂದು ನನ್ನ ತಾಯಿ ಮತ್ತು ನನ್ನ ಸಹೋದರಿಯರು ಹಕ್ಕು ಖುಲಾಸೆ ಪತ್ರ ಮಾಡಿಕೊಡುವ ಮೂಲಕ ದಾವಾ ಆಸ್ತಿಯನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಒತ್ತುವರಿಯಾಗಿರುತ್ತದೆ ಎಂದು ಯಾವಾಗ ಗೊತ್ತಾಗಿರುತ್ತದೆ ಎಂದರೆ ದಾವಾ ಆಸ್ತಿಯನ್ನು ಸರ್ವೇ ಮಾಡಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಪ್ರತಿವಾದಿಯ ಆಸ್ತಿಯ ನಡುವೆ ನೀರು ಹೋಗುವ ಕಾಲುವೆ ಇದ್ದು, ಅಲ್ಲಿ ತಂತಿ ಬೇಲಿ ಇದೆ ಎಂದರೆ ಸಾಕ್ಷಿಯು ಕಾಲುವೆ ಇದೆ ಆದರೆ ತಂತಿಬೇಲಿ ಹಾಕಿಸಿಲ್ಲ ಪ್ರತಿವಾದಿಯರು ಕಾಲುವೆಯನ್ನು ಒತ್ತುವರಿ ಮಾಡಿ ನಮಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಕೆರೆಯಿಂದ ನೀರು ಹಾದು ಹೋಗುವ ಕಾಲುವೆ ಇದ್ದು, ಪ್ರತಿವಾದಿಯು ಹೇಗೆ ತಮಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನೀರು ಹೋಗುವ ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಬಂದು ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಗಾಗಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**